**ಸಾಕ್ಷಿಯನ್ನು ದಿಃ 10.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 17 ಎಂದು,

ಒಟ್ಟು 2 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 18 ಎಂದು,

ಡಿಸೆಬಿಲಿಟಿ ಸರ್ಟಿಫಿಕೇಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 19 ಎಂದು,

ಇಂಪ್ಲಾಟ್ ರೀಮೂವಲ್ ಕೋಟೇಶನ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 20 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ಶ್ರೀ ಪಿ.ಎ.ಎಸ್ ವಕೀಲರಿಂದ**

ಗಾಯಾಳುವಿಗೆ ಸರ್ಜರಿ ಶಸ್ತ್ರ ಚಿಕಿತ್ಸೆ ಮಾಡಿದ್ದೇವೆ. ಈ ಬಗ್ಗೆ ಡಿಸ್ ಚಾರ್ಜ್ ಸಮ್ಮರಿಯಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ಡಿಸ್ ಚಾರ್ಜ್ ಸಮ್ಮರಿಯಲ್ಲಿ ಕೇವಲ ಕನ್ಸಲ್ಟೆಂಟ್ ಎಂದು ನಮೂದಿದೆ ಎಂದರೆ ಸರಿಯಲ್ಲ. ಡಿಸ್ ಚಾರ್ಜ್ ಸಮ್ಮರಿಯಲ್ಲಿ ಟೂ ವೀಲರ್ ಹಾಗೂ ತ್ರೀ ವೀಲರ್ ಎಂದು ವಾಹನ ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ಗಾಯಾಳುವಿಗೆ ಸಂಪೂರ್ಣ ಚಿಕಿತ್ಸೆ ನಾನು ನೀಡಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಗಾಯ ವಾಸಿಯಾದ ನಂತರ ಬಿಡುಗಡೆ ಗೊಳಿಸಿದ್ದೇವೆ ಎಂದರೆ ಸಾಕ್ಷಿಯು ಶಸ್ತ್ರ ಚಿಕಿತ್ಸೆಯ ಮೂರು ದಿನದ ನಂತರ ಬಿಡುಗಡೆ ಗೂಳಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಗಾಯಾಳುವಿಗೆ ನೀಡಿದ್ದೇವೆ ಎನ್ನುವ ಮುಂದುವರೆದ ಚಿಕಿತ್ಸೆಯ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಅದು ಗಾಯಾಳುವಿನ ಬಳಿ ಇರುತ್ತದೆ ಎನ್ನುತ್ತಾರೆ. ಗಾಯಾಳು

ಸಹ ಮುಂದುವರೆದ ಚಿಕಿತ್ಸೆಯ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ದಿಃ 10.09.2025 ರ ಎಕ್ಸರೇ ಪ್ರಕಾರ ಗಾಯಾಳುವಿಗೆ ಮೂಳೆಗಳು ಕೂಡಿಕೊಂಡಿದೆ ಎಂದರೆ ಸರಿ. ಗಾಯಾಳು ಮಾಡುತ್ತಿರುವ ಕೆಲಸವನ್ನು ಮುಂದುವರಿಸಬಾರದು ಎಂದು ನಾವು ಡಿಸ್ ಚಾರ್ಜ್ ಸಮ್ಮರಿ ಹಾಗೂ ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಗಾಯಾಳುವಿಗೆ ಒಂದು ವಾರದ ಹಿಂದೆ ಹೊರರೋಗಿ ವಿಭಾಗದಲ್ಲಿ ಪರೀಕ್ಷಿಸಿದ್ದೇನೆ, ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಅದು ಗಾಯಾಳುವಿನ ಬಳಿ ಇದೆ ಎಂದು ಉತ್ತರಿಸಿರುತ್ತಾರೆ. ಮೆಡಿಕಲ್ ಗೈಡ್ ಲೈನ್ಸ್ ಪ್ರಕಾರ ಗಾಯಾಳುವಿಗೆ ಹೊರರೋಗಿಯಾಗಿ ಪರೀಶಿಲಿಸಿ ಚಿಕಿತ್ಸೆ ನೀಡಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಗಾಯಾಳುವಿಗೆ ಅಂಗನ್ಯೂನತೆ ಇದಿದ್ದರೆ ಗೈಡ್ ಲೈನ್ಸ್ ಪ್ರಕಾರ ಗಾಯಾಳುವನ್ನು ಮೆಡಿಕಲ್ ಬೋರ್ಡ್ ಗೆ ರೆಫರ್ ಮಾಡಬೇಕಿತ್ತು ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಮೆಡಿಕಲ್ ಬೋರ್ಡ್ ಗೆ ನಾವು ಗೈಡ್ ಲೈನ್ ಪ್ರಕಾರ ರೆಫರ್ ಮಾಡಬೇಕಿತ್ತು ಎಂದರೆ ಸರಿಯಲ್ಲ.

3. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಆರ್.ಓ.ಎಂ, ಮಜಲ್ ಸ್ಟ್ರೆಂತ್ ಮತ್ತು ಸ್ಟೆಬಿಲಿಟಿ ಕಾಂಪೋನೆಂಟ್ ಬಗ್ಗೆ ಓ.ಪಿ.ಡಿ. ಯಲ್ಲಿ ನಮೂದಿಸದೆ ಇರುವ ಕಾರಣ ಸದರಿ ಓ.ಪಿ.ಡಿ ಅನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಓ.ಪಿ.ಡಿ. ಗಾಯಾಳು ಬಳಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಲೆಫ್ಟ್ ಲೋಯರ್ ಲಿಂಬ್ ಭಾಗಕ್ಕೆ ಶೇಕಡಾ 36 ಎಂದು ಗಾಯಾಳುವಿಗೆ ಸಹಾಯ ಮಾಡಲು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎಂಬ ಕಾರಣಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ಮೆಡಿಕಲ್ ಗೆಜೆಟ್ ನೋಟೀಫಿಕೇಶನ್, ಗೈಡ್ ಲೈನ್ಸ್ ಪ್ರಕಾರ ಸಂಪೂರ್ಣ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಅನುಕೂಲವಾಗುವಂತೆ ನಿಪಿ. 19 ಅನ್ನು ತಪ್ಪಾಗಿ ತಯಾರಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

4. ಗಾಯಾಳು ಮೊದಲಿಗೆ ಸಮೃದ್ಧಿ ಆಸ್ಪತ್ರೆ ಕೆ.ಆರ್ ನಗರ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು ಬಂದಿದ್ದರು. ಸದರಿ ಆಸ್ಪತ್ರೆಯ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಅದು ನಮ್ಮ ಬಳಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಮೆಡಿಕಲ್ ಗೈಡ್ ಲೈನ್ ಪ್ರಕಾರ ನಾವು ನ್ಯೂನತಾ ದೃಢೀಕರಣ ಪತ್ರವನ್ನು ಕೊಡಲು ಅರ್ಹನಲ್ಲ ಎಂದರೆ ಸರಿಯಲ್ಲ. ಮೆಡಿಕಲ್ ಬೋರ್ಡ್ ನವರು ಮಾತ್ರ ದೃಢ ಪತ್ರ ನೀಡಲು ಅರ್ಹರು ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡಲು ನಿಪಿ. 20 ಕೋಟೇಶನ್ ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.